



ಇದುವರೆಗೆ ಬಾಹ್ಯಾಕಾಶದಲ್ಲಿ ವಿವಿಧ ರಾಷ್ಟ್ರಗಳಿಗೆ ಪೈಪೋಟಿ ನೀಡಲು ಭಾರತದ 'ಇಸ್ರೋ' ಏಕಾಂಗಿ ಹೋರಾಟದಲ್ಲಿದ್ದರೂ, ಘಟಾನುಘಟಿ ರಾಷ್ಟ್ರಗಳೆಲ್ಲ ಹಿಂತಿರುಗಿ ನೋಡುವಂಥ52 ಅನೇಕ ಸಾಧನೆಗಳನ್ನು ಮಾಡುತ್ತಾ ಬಂದಿದೆ. ಈ ಮೂಲಕ ಬಾಹ್ಯಾಕಾಶದಲ್ಲಿ ನಮ್ಮ ಹಿಡಿತವು ಗಟ್ಟಿಯಾಗಿರುವಂತೆ ನೋಡಿಕೊಂಡು ಬಂದಿದೆ. ನವನವೀನ ತಂತ್ರಜ್ಞಾನಗಳನ್ನು ಬಳಸಿಕೊಂಡು, ಖಾಸಗಿ ಬಾಹ್ಯಾಕಾಶ ಸಂಸ್ಥೆಗಳನ್ನು ಹುಟ್ಟು ಹಾಕಿ ಇಸ್ರೋಗೆ ಸಾಥ್ ನೀಡುವ ಪ್ರಯತ್ನ ಭಾರತದಲ್ಲಿ ನಡೆಯಬೇಕಿದೆ.

## ಬಾಹ್ಯಾಕಾಶ ಪ್ರವಾಸ ಸುರಕ್ಷಿತವೇ?

ಈ ಪ್ರಶ್ನೆಗೆ ಈ ಕ್ಷಣದ ಉತ್ತರ ಸುರಕ್ಷಿತವಲ್ಲ. ಈ ಉದ್ಯಮದಲ್ಲಿ ಯಶಸ್ಸು ಕಾಣಲು ಹೊಡೆದಾಡುತ್ತಿರುವ ಖಾಸಗಿ ಕಂಪನಿಗಳು, ತಮ್ಮ ಸಾಮರ್ಥ್ಯವನ್ನು ಪ್ರಚುರಪಡಿಸಲು ನಡೆಸುವ ಪರೀಕ್ಷಾರ್ಥ ಹಾರಾಟಗಳಲ್ಲಿ ಅನೇಕ ಬಾರಿ ಮುಗ್ಗರಿಸಿವೆ. 'ವರ್ಜಿನ್ ಗ್ಯಾಲಕ್ಟಿಕಾ'ದ ನಿಯಂತ್ರಕ, ಪರೀಕ್ಷಾರ್ಥ ಹಾರಾಟದ ವೇಳೆ ನೆಲಕ್ಕೆ ಅಪ್ಪಳಿಸಿದ ಪರಿಣಾಮ ಸಾವನ್ನಪ್ಪಿದ್ದಾನೆ. ಹಾಗೆಯೇ ಸ್ಪೇಸ್ ಎಕ್ಸ್ ಸೇರಿದಂತೆ ಅನೇಕ ಖಾಸಗಿ ಕಂಪನಿಗಳು ಸಾವಿರಾರು ಕೋಟಿ ರೂಪಾಯಿಗಳನ್ನು ನೀರಿಗೆ ಚೆಲ್ಲಿ ಕೂತಿದ್ದಾರೆ. ಹಾಗೆ ನೋಡಿದರೆ, ಬಾಹ್ಯಾಕಾಶಕ್ಕೆ ಹೋದವರು ಸುರಕ್ಷಿತವಾಗಿ ಮರಳಿ ಬರುವಂತೆ ನೋಡಿಕೊಳ್ಳಲು ಯಾವ ಕಟ್ಟು ನಿಟ್ಟಿನ ಕಾಯ್ದೆಗಳೂ ಇಲ್ಲ. ಈ ದೆಸೆಯಿಂದ ನೋಡಿದರೆ ಈ ಉದ್ಯಮ ಇನ್ನಷ್ಟು ಸುಧಾರಿಸಿಕೊಳ್ಳಬೇಕಿದೆ. ತಂತ್ರಜ್ಞಾನದಲ್ಲಿ ನಾವಿನ್ನೂ ಪಳಗಬೇಕಿದೆ. ಎಂಬುದರಲ್ಲಿ ಎರಡು ಮಾತಿಲ್ಲ. ಗ್ರಹಗಳಿಂದ ಗ್ರಹಕ್ಕೆ ನಮ್ಮ ಓಡಾಟ ಹೆಚ್ಚಾದರೆ ಭೂಮಿಯ ವಾಯುಮಂಡಲ ಹೇಗೆ ಸ್ಪಂದಿಸುತ್ತದೆ ಎನ್ನುವುದನ್ನೂ ಅಂದಾಜು ಮಾಡಬೇಕಾಗಿದೆ.

ಸವಾಲುಗಳೇನೇ ಇರಲಿ, ಉತ್ಸಾಹಿ ಸಾಹಸೋದ್ಯಮಿಗಳ ಪ್ರಯತ್ನದ ಫಲವಾಗಿ ಬಾಹ್ಯಾಕಾಶ ಪ್ರವಾಸೋದ್ಯಮ ಗರಿಗೆದರುತ್ತಿದೆ. ಆ ಕ್ಷೇತ್ರದಲ್ಲಿ ಅಸಂಖ್ಯಾತ ಅವಕಾಶಗಳು ಯುವಕರಿಗಾಗಿ ತೆರೆದುಕೊಳ್ಳುತ್ತಿವೆ, ಭವಿಷ್ಯತ್ತಿನಲ್ಲಿ ಯುವಕರ ಕನಸುಗಳೆಲ್ಲ ಮುಗಿಲೆತ್ತರಕ್ಕೆ ಏರಲಿವೆ.

ಹಾಗೊಂದು ವೇಳೆ ಈ ಕ್ಷೇತ್ರದಲ್ಲಿ ಸಂಪೂರ್ಣ ಹಿಡಿತ ಸಾಧಿಸುವಲ್ಲಿ ಮಾನವ ಯಶಸ್ವಿಯಾಗಿದ್ದೇ ಆದರೆ, ಬೇಸರವಾದಾಗೊಮ್ಮೆ ನಾವು ನೀವೆಲ್ಲಾ ಚಂದ್ರನೂರಿಗೆ ಹೋಗಿ ಬರಬಹುದಾಗಿದೆ. ಭೂಮಿ ಬೇಸರವೆನಿಸಿದರೆ ಹೆಗಲಿಗೊಂದು ಬ್ಯಾಗು ಏರಿಸಿಕೊಂಡು ಮಂಗಳನತ್ತ ಹೊರಟು ನಿಲ್ಲಬಹುದಾಗಿದೆ. ಆ ಗ್ರಹಗಳೇ ಬೇಜಾರಾಗಿ ಹೋದರೆ, ಏಕಾಂಗಿ ಸಂಚಾರಿ ಎಂಬಂತೆ ಅಂತರಿಕ್ಷದಲ್ಲಿ ಅಲೆದಾಡಲೂಬಹುದಾಗಿದೆ. ಮನುಷ್ಯನ ಕನಸು ಕಲ್ಪನೆಗಳಿಗೆ ತುದಿಮೊದಲಾದರೂ ಯಾವುದು?

ಪ್ರತಿಕ್ರಿಯಿಸಿ: feedback@sudha.co.in